3) ಇಲ್ಲ - ಕಲ್ಲುಗಣಿಗುತ್ತಿಗೆಯನ್ನು ಸ್ಥಗಿತಗೊಳಿಸಲಾಗಿದೆಯೆಂದು ತಿಳಿಸಿ ಕಲ್ಲುಗಣಿ ಗುತ್ತಿಗೆ ಪುಸ್ತಕಗಳನ್ನು ಹಿಂದಿರುಗಿಸಿದ ದಿನಾಂಕದಿಂದ 3 ತಿಂಗಳ ಸೂಚನೆ ಅವಧಿಯನ್ನು ಪರಿಗಣಿಸಿ, ಸದರಿ ದಿನಾಂಕದವರೆಗೆ ಬಾಕಿ ಪಾವತಿ ಮಾಡಿದ್ದರೆ, ಆ ಕಲ್ಲು ಗಣಿಗುತ್ತಿಗೆಯ ಅಧ್ಯರ್ಪಣೆಯನ್ನು ಒಪ್ಪಿಕೊಳ್ಳಲಾಗುತ್ತಿದೆ.

4) ಇಲ್ಲ

5) ಉದ್ಭವಿಸುವುದಿಲ್ಲ.

ವಿಷಯ : ಸೇದಂ ತಾಲ್ಲೂಕಿನಲ್ಲಿ ಹರಿಜನ ಗಿರಿಜನರಿಗಾಗಿ ಪಡೆದ ಜಮೀನಿನ ಭೂ ಮಾಲೀಕರಿಗೆ ಹಣ ವಿತರಿಸುವಲ್ಲಿ ಅವ್ಯವಹಾರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 336(416)

ಶ್ರೀ. ಬಸವಂತರೆಡ್ಡಿ ಪೋತಕಪಲ್ಲಿ (ಸೇದಂ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಭೂಮಿ ವಿತರಿಸಲು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಖರೀದಿ ಮಾಡಿ ಭೂ ಮಾಲೀಕರಿಗೆ ಅದರ ಬೆಲೆ ವಿತರಣೆ ಮಾಡುವಲ್ಲಿ ತಾರತಮ್ಯ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸೇಡಂ ತಾಲ್ಲೂಕಿನಲ್ಲಿ ಈ ನಿಗಮದ ವತಿಯಿಂದ ಭೂಮಿ ವಿತರಣೆ ಮಾಡಲು ಖರೀದಿ ಮಾಡಿರುವ ಭೂ ಮಾಲೀಕರ ಹೆಸರು ದಿನಾಂಕವಾರು, ಕ್ರಮಾಂಕವಾರು ಅಂತೆಯೇ ಫಲಾನುಭವಿಗಳ ಹೆಸರು ಗ್ರಾಮವಾರು ವಿವರ ನೀಡುವುದು.

ಇ) ಭೂ ಮಾಲಿಕರಿಗೆ ಭೂಮಿ ಬೆಲೆ ಕ್ರಮಾಕವಾರು. ದಿನಾಂಕವಾರು ವಿತರಿಸಲಾಗಿದೆಯೇ, ಇಲ್ಲದಿದ್ದರೆ ಇದಕ್ಕೆ ಕಾರಣವೇನು, ಇದರ ಜವಾಬ್ದಾರರು ಯಾರು,

ಈ) ವರ್ಷಾನುಗಟ್ಟಲೇ ಭೂ ಮಾಲೀಕರನ್ನು ತಿರುಗಾಡಿಸುವವರಿಗೆ ಅವರ ಹಣ ವಿತರಣೆ ಮಾಡುವುದು ಯಾವಾಗ,

ಉ) ಈ ತಾರತಮ್ಯ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಫಲಾನುಭವನಿಗಳಿಗೆ ಜಮೀನು ನೋಂದಣ ಮಾಡಿದ ಸಂದರ್ಭದಲ್ಲಿಯೇ ಕ್ರಾಸ್‌ಮಾಡಿದ ಚೆಕ್‌ಗಳ ಮೂಲಕ ಭೂ ಮಾಲೀಕರಿಗೆ ಹಣ ಪಾವತಿ ಮಾಡಲಾಗುತ್ತಿದೆ.

ಈ) ಜಮೀನು ನೋಂದಣಿ ಮಾಡಿಸಲಾದ ಎಲ್ಲಾ ಭೂ ಮಾಲೀಕರಿಗೂ ಹಣ ಪಾವತಿ ಮಾಡಲಾಗಿದೆ. ಬಾಕಿ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ